ನಿಯೋಜನೆ ರದ್ದು ಮಾಡುವುದು

1481(2615), ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಛೇರಿಗಳಲ್ಲಿ ಖಾಲಿ ಹುದ್ದೆಗಳಿಲ್ಲದಿದ್ದರೂ ಪ್ರೌಢ ಶಾಲೆಗಳಿಂದ ದ್ವಿತೀಯ ದರ್ಜೆ ಸಹಾಯಕ ಮತ್ತು ಪ್ರಥಮ ದರ್ಜೆ ಸಹಾಯಕ ಸಿಬ್ಬಂದಿಯನ್ನು ನಿಯೋಜನೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿಯ ನಿಯೋಜನೆಗಳಿಂದ ಆರ್.ಎಂ.ಎಸ್.ಎ. ಯೋಜನೆ ಜಾರಿಯಲ್ಲಿರುವ ಪ್ರೌಢಶಾಲೆಗಳಲ್ಲಿನ ಕಛೇರಿ ಕೆಲಸಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ರೀತಿ ನಿಯೋಜನೆ ಮಾಡಿಕೊಂಡಿರುವ ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುವಾರು ಪೂರ್ಣ ವಿವರ ನೀಡುವುದು;

ಈ) ಕೂಡಲೇ ಇಂತಹ ನಿಯೋಜನೆಗಳನ್ನು ರದ್ದು ಮಾಡುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು, ಗಮನಕ್ಕೆ ಬಂದಿದೆ.

ಆ) ಹೌದು, ಗಮನಕ್ಕೆ ಬಂದಿದೆ.

ಇ) ಪೂರ್ಣ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ಉಪ ನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳ ಕೆಲಸದ ಒತ್ತಡ ಜಾಸ್ತಿ ಇದ್ದ ಪ್ರಯುಕ್ತ ಕೆಲಸದ ಒತ್ತಡ ಕಡಿಮೆ ಇರುವ ಶಾಲೆಗಳಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಉಪ ನಿರ್ದೇಶಕರ ಕಛೇರಿ ಹಂತದಲ್ಲಿ ಈ ರೀತಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡಿದ್ದು, ಕೆಲಸದ ಒತ್ತಡ ಕಡಿಮೆಯಾದ ನಂತರ ಅವರುಗಳನ್ನು ಆಯಾ ಶಾಲೆಗಳಿಗೆ ಹಿಂದಿರುಗಿಸಲಾಗುವುದು.

ಅನುಬಂಧ

ಜಿಲ್ಲೆ	ಕಛೇರಿ	ನಿಬ್ಬಂದಿಗಳ ಹೆಸರು ಶ್ರೀ/ಶ್ರೀಮತಿ
ತುಮಕೂರು ಜಿಲ್ಲೆ	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ತುಮಕೂರು ತಾಲ್ಲೂಕು	1. ಮಹಾಂತೇಶ್ವರ, ಪ್ರದಸ., ಸ.ಪ್ರೌಶಾಲೆ, ಬ್ಯಾತ 2. ಗುರುಪ್ರಸಾದ್, ಪ್ರದಸ., ಸ.ಪ.ಪೂ.ಕಾಲೇಜು (ಪ್ರೌಢ ಶಾಲೆ ವಿಭಾಗ) ಕ್ಯಾತ್ಸಂದ್ರ 3. ಶೈಲಜ, ದ್ವಿದಸ., ಸ.ಪ.ಪೂ.ಕಾಲೇಜು (ಪ್ರೌಢ ಶಾಲೆ ವಿಭಾಗ) ತುಮಕೂರು 4. ಕುಮಾರಸ್ವಾಮಿ, ದ್ವಿದಸ., ಸ.ಪ.ಪೂ.ಕಾಲೇಜು (ಪ್ರೌಢ ಶಾಲೆ ವಿಭಾಗ) ತುಮಕೂರು
	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಗುಬ್ಬಿ ತಾಲ್ಲೂಕು	1. ಗಂಗಾಧರಸ್ವಾಮಿ, ದ್ವಿದಸ., ಸ.ಪ್ರೌಶಾಲೆ, ಅಳಿಲುಘಟ್ಟ 2. ಹರೀಶ್, ದ್ವಿದಸ., ಸ.ಪ.ಪೂ.ಕಾಲೇಜು. (ಪ್ರೌಢ ಶಾಲೆ ವಿಭಾಗ) ಗುಬ್ಬಿ
	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ತಿಪಟೂರು ತಾಲ್ಲೂಕು	ವೆಂಕಟೇಶ, ಪ್ರದಸ., ಸ.ಪ್ರೌಶಾಲೆ, ತಡಸೂರು.
	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕುಣಿಗಲ್ ತಾಲ್ಲೂಕು.	1. ಪುಷ್ಪಲತ, ಪ್ರದಸ., ಸ.ಪ್ರೌಶಾಲೆ, ಕಂಪನಹಳ್ಳಿ 2. ರಂಗನಾಥ, ದ್ವಿದಸ., ಸ.ಪ.ಪೂ.ಕಾಲೇಜು, (ಪ್ರೌಢ ಶಾಲೆ ವಿಭಾಗ) ಹುಲಿಯೂರುದುರ್ಗ 3. ನಾಗರಾಜು, ದ್ವಿದಸ., ಸ.ಪ್ರೌಶಾಲೆ, ತರೇದಕುಪ್ಪೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ	ಉಪ ನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಕೆ.ವೆಂಕಟೇಶ, ದ್ವಿದಸ., ಸ.ಪ.ಪೂ.ಕಾಲೇಜು (ಪ್ರೌಢ ಶಾಲಾ ವಿಭಾಗ) ತ್ಯಾಮಗೊಂಡ್ಲು, ನೆಲಮಂಗಲ ತಾ.,
	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ	ನಾಗರಾಜು, ದ್ವಿದಸ., ಸ.ಪ್ರೌಶಾ, ಕಾಡತಿಪ್ಪೂರು, ದೊಡ್ಡಬಳ್ಳಾಪುರ-ತಾ.,
	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹೊಸಕೋಟೆ	ಸುರೇಶಕುಮಾರ, ಪ್ರದಸ., ಸರ್ಕಾರಿ ಬಾಲಕರ ಪ್ರೌಢ ಶಾಲೆ, ಹೊಸಕೋಟೆ ಟೌನ್
	ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ನೆಲಮಂಗಲ	1. ಎಂ.ಬಿ.ರವಿಕುಮಾರ್, ಪ್ರದಸ., ಸರ್ಕಾರಿ ಪ್ರೌಢ ಶಾಲೆ, ದೇವರಹೊಸಹಳ್ಳಿ, ನೆಲಮಂಗಲ ತಾ., 2. ಶ್ವೇತ ವಿ.ಜ, ದ್ವಿದಸ., ಸರ್ಕಾರಿ ಪ್ರೌಢ ಶಾಲೆ, ಬೈರನಾಯಕನಹಳ್ಳಿ, ನೆಲಮಂಗಲ ತಾ.,

(ಎಸ್.ಬಿ.ಪಟಗಾರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಶಿಕ್ಷಣ (ಪ್ರಾಥಮಿಕ(ಸಾಮಾನ್ಯ)

ಸಂಖ್ಯೆ: ಇಡಿ 147 ಎಸ್‌ಬಿಪಿ 2014